# ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ–2018

## ಪದೇ ಪದೇ ಕೇಳಬಹುದಾದ ಪ್ರಶ್ನೆಗಳು :

1. **ಶಿಕ್ಷಕರ ಅರ್ಹತಾ ಪರೀಕ್ಷೆ ಎಂದರೇನು?**

   ಶಿಕ್ಷಕರ ಅರ್ಹತಾ ಪರೀಕ್ಷೆಯು (ಟಿ.ಇ.ಟಿ) ಶಿಕ್ಷಕ ವೃತ್ತಿಯನ್ನು ಆಯ್ಕೆ ಮಾಡಲು ಬಯಸುವ ಅಭ್ಯರ್ಥಿಗಳ ಕೌಶಲವನ್ನು ಅಳೆಯುವ ಮಾನದಂಡ. ಎಲ್ಲಾ ಶಾಲೆಗಳಲ್ಲಿ (ಸರ್ಕಾರಿ/ಅನುದಾನಿತ/ಖಾಸಗಿ) 1 ರಿಂದ 8ನೇ ತರಗತಿಗಳಿಗೆ ಪಾಠ ಮಾಡುವವರು ಟಿ.ಇ.ಟಿ ಪರೀಕ್ಷೆಯಲ್ಲಿ ಕಡ್ಡಾಯವಾಗಿ ಉತ್ತೀರ್ಣರಾಗಿರಬೇಕು. ಈ ಪರೀಕ್ಷೆಯನ್ನು ಸಿ.ಎ.ಸಿಯು ನಡೆಸುತ್ತದೆ. ಶಿಕ್ಷಕರ ಅರ್ಹತಾ ಪರೀಕ್ಷೆಯನ್ನು 2011 ರಲ್ಲಿ ನ್ಯಾಷನಲ್ ಕೌನ್ಸಿಲ್ ಫಾರ್ ಟೀಚರ್ ಎಜುಕೇಷನ್ ಪ್ರಾರಂಭಿಸಿದೆ. NCTE ಮಾರ್ಗದರ್ಶನದ ಅನ್ವಯ ಎಲ್ಲಾ (ಸರ್ಕಾರಿ/ಅನುದಾನಿತ/ಅನುದಾನರಹಿತ/ಖಾಸಗಿ) ಶಾಲೆಗಳಲ್ಲಿ ಪಾಠ ಬೋಧನೆ ಮಾಡುವ ಶಿಕ್ಷಕರು ಕಡ್ಡಾಯವಾಗಿ TET ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

2. **KARTRT ಎಂದರೇನು?**

   ಕರ್ನಾಟಕ ರಾಜ್ಯದಲ್ಲಿ ಮಾಡುವ TET ಪರೀಕ್ಷೆಯನ್ನು KARTET ಎಂದು ಕರೆಯಲಾಗುತ್ತದೆ. ಕರ್ನಾಟಕ ಸರ್ಕಾರವು ಈ ಪರೀಕ್ಷೆಯನ್ನು ನಡೆಸುವ ಜವಾಬ್ದಾರಿಯನ್ನು ಕೇಂದ್ರೀಕೃತ ದಾಖಲಾತಿ ಘಟಕಕ್ಕೆ (ಸಿ.ಎ.ಸಿ) ವಹಿಸಿದೆ.

3. **KARTET ಏಕೆ?**

   ಏಕರೂಪ ನೇಮಕಾತಿ ಪ್ರಕ್ರಿಯೆಯನ್ನು ಕಾಯ್ದುಕೊಳ್ಳುವ ಹಾಗೂ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಹಂತದಲ್ಲಿ ಪಾಠ ಬೋಧನೆ ಮಾಡುವ ಶಿಕ್ಷಕರು ಬೋಧನಾ ಸವಾಲುಗಳನ್ನು ಎದುರಿಸಲು ಅಗತ್ಯವಿರುವ ಕೌಶಲಗಳು, ಸಾಮರ್ಥ್ಯ, ಯೋಗ್ಯತೆ ಹಾಗೂ ಪ್ರತಿಭೆಯನ್ನು ಹೊಂದಿರುವುದನ್ನು ದೃಢೀಕರಿಸಿಕೊಳ್ಳಲು KARTRT ನ್ನು ಪ್ರಾರಂಭಿಸಲಾಗಿದೆ.

   **KARTET ನ್ನು ಅಳವಡಿಸುವ ಉದ್ದೇಶಗಳು:**

   - ಸರ್ಕಾರಿ/ಖಾಸಗಿ ಶಾಲೆಗಳಲ್ಲಿ ಶಿಕ್ಷಕರಾಗ ಬಯಸುವ ಸೇವಾಪೂರ್ವ/ಸೇವಾ ನಿರತ ಶಿಕ್ಷಕರಿಗೆ ಅವಕಾಶ ಕಲ್ಪಿಸುವುದು.
   - ನೇಮಕಾತಿ ಪ್ರಕ್ರಿಯೆಯಲ್ಲಿ ರಾಷ್ಟ್ರೀಯ ಮಾನದಂಡಗಳನ್ನು ಕಾಪಾಡುವುದು.
   - ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವುದು.
   - ಸಾಧನಾ ಗುಣಮಟ್ಟವನ್ನು ಉತ್ತಮ ಪಡಿಸಿಕೊಳ್ಳಲು ಶಿಕ್ಷಕ ಶಿಕ್ಷಣ ಸಂಸ್ಥೆಗಳನ್ನು ಪ್ರೋತ್ಸಾಹಿಸುವುದು.
   - ಶಿಕ್ಷಕರ ಗುಣಮಟ್ಟಕ್ಕೆ ಪ್ರಾಶಸ್ತ್ಯ ನೀಡುವುದು.

4. **D.Eled ಮಾಡದೆಯೇ 12ನೇ ತರಗತಿಯ ನಂತರ ನೇರವಾಗಿ KARTETಗೆ ಅರ್ಜಿ ಸಲ್ಲಿಸಬಹುದೇ?**

   ನೀವು 12ನೇ ತರಗತಿಯಲ್ಲಿ ಶೇ. 50% ಗಳಿಸಿದ್ದು ಪ್ರಾಥಮಿಕ ಶಿಕ್ಷಣದ ಡಿಪ್ಲೊಮಾದ 2ನೇ ವರ್ಷದ ಪರೀಕ್ಷೆಗೆ ಹಾಜರಾಗಿದ್ದರೆ ನೇರವಾಗಿ KARTET ಗೆ ಅರ್ಜಿ ಸಲ್ಲಿಸಬಹುದು.

5. **B.Ed ಪದವಿಯನ್ನು ಹೊಂದಿದ್ದರೂ KARTET ಯನ್ನು ಬರೆಯಬೇಕೆ?**

ಹೌದು, ಸರ್ಕಾರದ ಮಾನ್ಯತೆ ಪಡೆದ ಯಾವುದೇ ಶಾಲೆಗಳಲ್ಲಿ ಬೋಧಿಸಬೇಕಾದರೆ ಕಡ್ಡಾಯವಾಗಿ KARTET ಅರ್ಹತೆಯನ್ನು ಪಡೆದಿರಬೇಕು.

6. **KARTET ಅರ್ಹತೆಯನ್ನು ಹೊಂದಿದ್ದರೂ ಸ್ಪರ್ಧಾತ್ಮಕ ಪರೀಕ್ಷೆಯನ್ನು ತೆಗೆದುಕೊಳ್ಳಬೇಕೆ?**

ಹೌದು, KARTET ಪರೀಕ್ಷೆಯು ಶಿಕ್ಷಕರಾಗಬಯಸುವವರಿಗೆ ಕಡ್ಡಾಯ ಪರೀಕ್ಷೆ ಆಗಿರುವುದರಿಂದ KARTET ಅರ್ಹತೆ ಹೊಂದಿದ್ದರೂ ಸ್ಪರ್ಧಾತ್ಮಕ ಪರೀಕ್ಷೆಯನ್ನು ತೆಗೆದುಕೊಳ್ಳಬೇಕು.

7. **D.Eled ಪದವಿ ಹೊಂದಿದ ನಾನು KARTET ತೆಗೆದುಕೊಳ್ಳಬಹುದೇ?**

ಹೌದು, KARTET ತೆಗೆದುಕೊಳ್ಳಲು ನೀವು ಅರ್ಹರಿರುವಿರಿ.

8. **ನಾನು B.Sc ಅಂತಿಮ ವರ್ಷದಲ್ಲಿ ಓದುತ್ತಿದ್ದೇನೆ. KARTET ತೆಗೆದುಕೊಳ್ಳಬಹುದೆ?**

ಇಲ್ಲ, ನೀವು KARTETಗೆ ಅರ್ಜಿಹಾಕಲು ಅರ್ಹರಿಲ್ಲ.

9. **MAನಲ್ಲಿ ಶೇ.55 ನ್ನು ಗಳಿಸಿದ್ದು, B.ed ಪದವಿ ಹೊಂದಿರುವ ನಾನು KARTETಯನ್ನು ಬರೆಯಬಹುದೇ?**

ಹೌದು, KARTET ತೆಗೆದುಕೊಳ್ಳಲು ನೀವು ಅರ್ಹರಾಗಿರುವಿರಿ.

10. **KARTET ಬರೆಯಲು ಗರಿಷ್ಠ ವಯೋಮಿತಿ ಏನು?**

KARTET ತೆಗೆದುಕೊಳ್ಳಲು ಯಾವುದೇ ಗರಿಷ್ಠ ವಯೋಮಿತಿ ಇರುವುದಿಲ್ಲ.

11. **ನಾನು ಭಾರತ ದೇಶದ ನಾಗರೀಕನಲ್ಲ, KARTET ಗೆ ಅರ್ಜಿ ಹಾಕಬಹುದೇ?**

ಇಲ್ಲ. ಭಾರತೀಯ ನಾಗರೀಕರು ಮಾತ್ರ KARTET ಗೆ ಅರ್ಜಿ ಹಾಕಬಹುದು.

12. **ನಾನು B.Ed ಪದವಿ ಹೊಂದಿರುವುದಿಲ್ಲ. BE (IT) ವಿದ್ಯಾರ್ಹತೆಯೊಂದಿಗೆ KARTET ಬರೆಯಲು ಅರ್ಹನೇ?**

ಇಲ್ಲ, KARTET ಬರೆಯಲು ನೀವು ಅರ್ಹರಿರುವುದಿಲ್ಲ.

13. **KARTET ನಲ್ಲಿ ಋಣಾತ್ಮಕ ಮೌಲ್ಯಮಾಪನ ಮಾಡಲಾಗುತ್ತದೆಯೇ?**

ಇಲ್ಲ, ಯಾವುದೇ ಋಣಾತ್ಮಕ ಮೌಲ್ಯಮಾಪನ ಇರುವುದಿಲ್ಲ.

14. **KARTET ಪ್ರಮಾಣ ಪತ್ರ ಎಷ್ಟು ವರ್ಷ ಮಾನ್ಯತೆ ಹೊಂದಿರುತ್ತದೆ?**

KARTET ಪ್ರಮಾಣ ಪತ್ರವು 7 ವರ್ಷಗಳವರೆಗೆ ಮಾನ್ಯತೆ ಹೊಂದಿರುತ್ತದೆ.

15. **KARTET ಪರೀಕ್ಷೆಗೆ ಎಷ್ಟು ಬಾರಿ ಹಾಜರಾಗಬಹುದು?**

ಎಷ್ಟು ಬಾರಿಯಾದರೂ KARTET ಪರೀಕ್ಷೆಯನ್ನು ಬರೆಯಬಹುದು. ನಿಮ್ಮ KARTET ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆಯಲು ಎಷ್ಟು ಬಾರಿ ಬೇಕಾದರೂ ಪರೀಕ್ಷೆಗೆ ಹಾಜರಾಗಬಹುದು.

16. **SC/ST/OBC ವರ್ಗಕ್ಕೆ ಸೇರಿರುವ ವಿದ್ಯಾರ್ಥಿಗಳು ಉತ್ತೀರ್ಣಗೊಳ್ಳಲು ಶೇ. ಅಂಕಗಳ ಮಿತಿ ಎಷ್ಟು?**

ಎಲ್ಲಾ ವರ್ಗದ ವಿದ್ಯಾರ್ಥಿಗಳು ಉತ್ತೀರ್ಣರಾಗಲು ಶೇ. 60 ಅಂಕಗಳನ್ನು ಪಡೆಯಬೇಕು ಹಾಗೂ SC/ST /C1 ವಿದ್ಯಾರ್ಥಿಗಳು ಶೇ. 55 ಅಂಕಗಳನ್ನು ಪಡೆದಿರಬೇಕು.

17. **KARTET ನ ಪಠ್ಯವಸ್ತು ಏನು?**

www.schooleducation.kar.nic.in ಕೊಂಡಿಯಲ್ಲಿ KARTETನ ವಿವರವಾದ ಪಠ್ಯವಸ್ತುವನ್ನು ಪಡೆಯಬಹುದು.

18. **KARTET ಯನ್ನು ತೆಗೆದುಕೊಳ್ಳಲು ಅರ್ಹತಾ ಮಾನದಂಡಗಳೇನು?**

ಕೆಳಗಿನ ಕೊಂಡಿಯಲ್ಲಿ KARTET ಬರೆಯಲು ಅರ್ಹತಾ ಮಾನದಂಡಗಳನ್ನು ನೀಡಿದೆ. www.schooleducation.kar.nic.in

19. **ದೈಹಿಕ ಶಿಕ್ಷಕರು/ವೃತ್ತಿ ಶಿಕ್ಷಕರಿಗೆ TET ಯು ಕಡ್ಡಾಯವೇ?**

ಇಲ್ಲಿಯವರೆವಿಗೂ ದೈಹಿಕ ಶಿಕ್ಷಕರು /ವೃತ್ತಿ ಶಿಕ್ಷಕರಿಗೆ TETಯನ್ನು ನಿಗದಿ ಮಾಡಿರುವುದಿಲ್ಲ.

20. **ಕೇಂದ್ರೀಕೃತ ದಾಖಲಾತಿ ಘಟಕವು KARTET ಗೆ ಹೇಗೆ ಸಂಬಂಧಿಸಿದೆ?**

ಕರ್ನಾಟಕದಲ್ಲಿ KARTET ಪರೀಕ್ಷೆಯನ್ನು ನಡೆಸಲು ಕೇಂದ್ರೀಕೃತ ದಾಖಲಾತಿ ಘಟಕವು ಪರೀಕ್ಷಾ ಪ್ರಾಧಿಕಾರವಾಗಿರುತ್ತದೆ.

21. **ಶಿಕ್ಷಕರ ನೇಮಕಾತಿಯಲ್ಲಿ KARTET ನ ಪಾತ್ರವೇನು?**

ಶಾಲೆಗಳಲ್ಲಿ ಪಾಠ ಮಾಡಲು ಇಚ್ಚಿಸುವವರಿಗೆ KARTET ಕಡ್ಡಾಯ ಪರೀಕ್ಷೆಯಾಗಿದೆ. ಆದಾಗ್ಯೂ ಸದರಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ಮಾತ್ರಕ್ಕೆ ಶಿಕ್ಷಕ ಉದ್ಯೋಗ ಖಾತ್ರಿಯಾಗುವುದಿಲ್ಲ. ನೇಮಕಾತಿಯು ಇತರೆ ವಿವಿಧ ಅಂಶಗಳನ್ನು ಆಧರಿಸಿದೆ.

22. **KARTET ಗೆ ತಯಾರಾಗಲು ಕಲಿಕಾ ಸಾಮಗ್ರಿಗಳನ್ನು ಒದಗಿಸುವಿರಾ?**

ಇಲ್ಲ, ಅಭ್ಯಾಸ ಮಾಡಲು ಹಿಂದಿನ ವರ್ಷದ ಪ್ರಶ್ನೆ ಪತ್ರಿಕೆಗಳು ವೆಬ್‌ಸೈಟ್‌ನಲ್ಲಿ ಲಭ್ಯವಿದೆ.

23. **KARTET 2018 ಕ್ಕೆ ಹೇಗೆ ಆನ್‌ಲೈನ್ ಅರ್ಜಿ ಸಲ್ಲಿಸುವುದು?**

www.schooleducation.kar.nic.in ವೆಬ್‌ಸೈಟ್‌ನ್ನು ಸಂಪರ್ಕಿಸಿ ನೀಡಿರುವ ಸೂಚನೆಗಳನ್ನು ಗಮನವಿಟ್ಟು ಓದಿ. ಪುಟದ ಕೆಳಭಾಗದಲ್ಲಿ ಆನ್‌ಲೈನ್ ಅರ್ಜಿ ಸಲ್ಲಿಸುವ ಕೊಂಡಿಯನ್ನು ನೋಡುವಿರಿ.

24. **KARTET 2018 ಗೆ ಕುಳಿತುಕೊಳ್ಳಲು ಅರ್ಹತಾ ಮಾನದಂಡಗಳೇನು?**

www.schooleducation.kar.nic.in ವೆಬ್‌ಸೈಟ್‌ನ್ನು ಸಂಪರ್ಕಿಸಿ ಎರಡೂ ಪತ್ರಿಕೆಗಳಿಗೆ ಕನಿಷ್ಠ ಅರ್ಹತಾ ಮಾನದಂಡಗಳ ಬಗ್ಗೆ ತಿಳಿಯಿರಿ.

25. **KARTET ಪ್ರವೇಶ ಪತ್ರವನ್ನು ಯಾವಾಗ ಪಡೆಯುತ್ತೇನೆ?**

ಅಭ್ಯರ್ಥಿಗಳು ಪ್ರವೇಶ ಪತ್ರವನ್ನು 23, ಜನವರಿ 2019 ರಿಂದ ಪರೀಕ್ಷೆ ದಿನಾಂಕದವರೆಗೂ ಡೌನ್‌ಲೋಡ್ ಮಾಡಿಕೊಳ್ಳಬಹುದು.

**26. ಪರೀಕ್ಷೆಯ ದಿನಾಂಕವೇನು?**

ಫೆಬ್ರವರಿ 03, 2019

**27. KARTET ಪರೀಕ್ಷೆಯನ್ನು ಯಾವ ವಿಧಾನದಲ್ಲಿ ನಡೆಸಲಾಗುವುದು?**

KARTETನ್ನು ಆಫ್‌ಲೈನ್ ಮೋಡ್‌ನಲ್ಲಿ ನಡೆಸಲಾಗುವುದು.

**28. KARTET ನ ಅನ್ವಯ ಸಾಧ್ಯತೆಗಳೇನು?**

ಕರ್ನಾಟಕ ರಾಜ್ಯದಲ್ಲಿ ಮಾನ್ಯತೆ ಹೊಂದಿದ ಎಲ್ಲಾ (ಸರ್ಕಾರಿ, ಅನುದಾನಿತ, ಅನುದಾನ ರಹಿತ) ಶಾಲೆಗಳಲ್ಲಿ ಶಿಕ್ಷಕ ವೃತ್ತಿಯನ್ನು ಬಯಸುವವರಿಗೆ ಅನ್ವಯಿಸುತ್ತದೆ. ರಾಜ್ಯ ಸರ್ಕಾರ/ಸ್ಥಳೀಯ ಸಂಸ್ಥೆಗಳ ಸ್ವಾಯತ್ತತೆ ಹಾಗೂ ನಿರ್ವಹಣೆಯಲ್ಲಿರುವ ಹಾಗೂ ಅನುದಾನಿತ ಶಾಲೆಗಳಲ್ಲಿ KARTET ಪರಿಗಣಿಸಲಾಗುತ್ತದೆ.

**29. KARTET ಆನ್‌ಲೈನ್‌ನಲ್ಲಿ ದಾಖಲಾಗಲು ಇರುವ ಸಮಯಾವಕಾಶವೇನು?**

ಡಿಸೆಂಬರ್ 5, 2018 ರಿಂದ ಪ್ರಾರಂಭವಾಗಿ 25, ಡಿಸಂಬರ್ 2018ರವರೆಗೆ ಆನ್‌ಲೈನ್ ದಾಖಲಾಗಲು ಅವಕಾಶ ಇರುತ್ತದೆ.

**30. KARTET ಪರೀಕ್ಷಾ ಶುಲ್ಕ ದರವೇನು?**

| ವಿಭಾಗ | ಪತ್ರಿಕೆ-1 ಅಥವಾ ಪತ್ರಿಕೆ-2 | ಪತ್ರಿಕೆ-1 ಮತ್ತು ಪತ್ರಿಕೆ-2 |
|---|---|---|
| ಸಾಮಾನ್ಯ / OBC | ರೂ. 700/- | ರೂ. 1000/- |
| SC/ST/ಅ1 | ರೂ. 350/- | ರೂ. 500/- |

ಸೂಚನೆ: ಅಂಗವಿಕಲ ಅಭ್ಯರ್ಥಿಗಳಿಗೆ ಯಾವುದೇ ಪರೀಕ್ಷಾ ಶುಲ್ಕವಿರುವುದಿಲ್ಲ.

**31. KARTET ಪ್ರಮಾಣ ಪತ್ರವನ್ನು ನೀಡಲು ಅವಶ್ಯವಿರುವ ಅರ್ಹ ಅಂಕಗಳು ಎಷ್ಟು?**

KARTET ಪರೀಕ್ಷೆ ತೆಗೆದುಕೊಳ್ಳುವ ಅಭ್ಯರ್ಥಿಗಳಿಗೆ ಅಂಕಪಟ್ಟಿಯನ್ನು ನೀಡಲಾಗುವುದು. ಶೇ. 60 ಕ್ಕಿಂತಲೂ ಹೆಚ್ಚು ಅಂಕಗಳನ್ನು ಪಡೆದ ಅಭ್ಯರ್ಥಿಗಳಿಗೆ SC, ST, ಪ್ರವರ್ಗ 1 ಮತ್ತು ಅಂಗವಿಕಲ –55%) ಅರ್ಹತಾ ಪ್ರಮಾಣ ಪತ್ರವನ್ನು ಒದಗಿಸಲಾಗುವುದು.

KARTET ಅರ್ಹತೆಯು ನೇಮಕಾತಿಗೆ ಇರಬೇಕಾದ ಅರ್ಹತೆಗಳಲ್ಲಿ ಒಂದಾಗಿದ್ದು, ನೇಮಕಾತಿ ಪಡೆಯಲು ಯಾವುದೇ ವ್ಯಕ್ತಿಗೆ ಹಕ್ಕನ್ನು ನೀಡಿರುವುದಿಲ್ಲ.

**32. ಹೈದ್ರಾಬಾದ್ ಕರ್ನಾಟಕ ಅಭ್ಯರ್ಥಿಗಳಿಗೆ 371ಜೆ ಪ್ರಕಾರ ಯಾವುದಾದರೂ ವಿನಾಯಿತಿ ಇದೆಯೇ?**

ಇಲ್ಲ. ಇದು ಅರ್ಹತಾ ಪರೀಕ್ಷೆಯಾಗಿರುವುದರಿಂದ 371 (ಜೆ) ಪ್ರಕಾರ ಯಾವುದೇ ವಿನಾಯಿತಿ ಇರುವುದಿಲ್ಲ.

**ಹಕ್ಕು ನಿವಾರಣೆ:-**

ಮೇಲ್ಕಾಣಿಸಿದ ಪದೇ ಪದೇ ಕೇಳಲಾಗುವ ಪ್ರಶ್ನೆಗಳ ಉತ್ತರಗಳು ಪರೀಕ್ಷಾ ಪ್ರಕ್ರಿಯೆಯನ್ನು ಸರಳವಾಗಿ ಅರ್ಥೈಸಿಕೊಳ್ಳುವ ಸಲುವಾಗಿ ಮಾತ್ರ, ಎಲ್ಲವೂ ಪರೀಕ್ಷಾ ನಿಯಮಗಳಿಗೆ ಒಳಪಟ್ಟಿರುತ್ತದೆ.